# ಹಾಲಕ್ಕಿ ಈಗ ಚುಕ್ಕಿ...

ಅಂಕೋಲೆಯ ಹಾಲಕ್ಕಿ ಸಮುದಾಯದ ಸುಕ್ರಿ ಬೊಮ್ಮಗೌಡ (ನಿಧನ: ಫೆಬ್ರುವರಿ 13, 2025) ಕರ್ನಾಟಕದ ಹಾಡುಹಕ್ಕಿಯಂತೆ ಇದ್ದವರು. ತಮ್ಮ ನೆಲದ ತವಕ ತಲ್ಲಣಗಳನ್ನೇ ಹಾಡುಗಳನ್ನಾಗಿಸಿಕೊಂಡು ನಾಡೋಜ ಎನ್ನಿಸಿಕೊಂಡವರು, ಪದ್ಮ ಪುರಸ್ಕಾರದ ಘನತೆ ಹೆಚ್ಚಿಸಿದವರು.

■ ಅಕ್ಷತಾ ಕೃಷ್ಣಮೂರ್ತಿ

ಹಾಡುಹಕ್ಕಿ ಹಾಡಕ್ಕಿಯಾಗಿ ಹಾಲಕ್ಕಿ ಆಗಿರಬಹುದು. ಹಾಡುಗಳೊಂದಿಗೆ ಬೆಸೆದುಕೊಂಡಿರುವ ಹಾಲಕ್ಕಿ ಸಮುದಾಯವನ್ನು ನೋಡಿದಾಗ ಯಾರಿಗಾದರೂ ಹೀಗನ್ನಿಸಿದರೆ ಆಶ್ಚರ್ಯವಿಲ್ಲ. ಹೀಗೆ, ಹಾಡುಗಳನ್ನೇ ಜೀವನದ ಶ್ರುತಿಯನ್ನಾಗಿಸಿಕೊಂಡವರು ಸುಕ್ರಿ ಬೊಮ್ಮಗೌಡ; ಹಾಲಕ್ಕಿ ಸಮುದಾಯದ ಧ್ರುವತಾರೆ.

ಸುಕ್ರಿ ಬೊಮ್ಮಗೌಡ ಎಲ್ಲರ ಪಾಲಿಗೆ ಪ್ರೀತಿಯ ಸುಕ್ರಜ್ಜಿ. ಹಾಸಿ ಹೊದ್ದುಕೊಳ್ಳುವಷ್ಟು ಬಡತನವಿದ್ದರೂ ತಮ್ಮ ಸಂಸ್ಕೃತಿಯನ್ನು ಬಿಡದೆ, ತಮ್ಮ ಹಾಡುಗಳನ್ನು ಜಗತ್ತಿಗೆ ತೋರಿಸಿದವರು ಸುಕ್ರಜ್ಜಿ. ಹಾಡುಗಳ ಮೂಲಕವೇ ಮಾತನಾಡುತ್ತಿದ್ದ ಈ ಹಾಲಕ್ಕಿ ಕೋಗಿಲೆಯ ಹುಟ್ಟೂರು ಅಂಕೋಲಾ ತಾಲೂಕಿನ ಶಿರಕುಳಿ. ತಂದೆ ಸುಬ್ಬ ಹನುಮ ಗೌಡ. ತಾಯಿ ದೇವಿ ಹೊನ್ನಪ್ಪ ಗೌಡ. ಶಿರಕುಳಿಯ ದೇವಿ ಮನೆಯವರನ್ನು 'ಮಾಬ್ಲಿ ಹೊನ್ನಪ್ಪನ ಮನೆ' ಎಂದು ಕರೆಯುತ್ತಿದ್ದುದನ್ನು, ಅಜ್ಜಿ ಹೆಸರಿನ ಆರಂಭದಿಂದಲೇ ತಮ್ಮ ತಾಯಿ ಮನೆಯವರನ್ನು ಕರೆಯುತ್ತಿದ್ದ ಬಗೆಯನ್ನು ಸುಕ್ರಜ್ಜಿ ನೆನಪಿಸಿಕೊಳ್ಳುತ್ತಿದ್ದರು. ಅವರಿಗೆ ಕರಿಯ ಹಾಗೂ ಸಣ್ಣ ಎಂಬ ಇಬ್ಬರು ಅಣ್ಣಂದಿರು, ಹೊಸಬಿ ಅಕ್ಕ, ತಂಗಿ ಆಯಮ್ಮ, ತಮ್ಮ ಮಂಗು ಇದ್ದರು. ಶುಕ್ರವಾರದ ದಿನ ಹುಟ್ಟಿದ ಕಾರಣಕ್ಕೆ ಇವರಿಗೆ ಸುಕ್ರಿ ಎಂಬ ಹೆಸರು ಬಂತು.

ಬಡತನವಿದ್ದರೂ ಸಾಂಸ್ಕೃತಿಕವಾಗಿ ಶ್ರೀಮಂತವಾದ ಕುಟುಂಬ ಅವರದಾಗಿತ್ತು. ಅಕ್ಕ ಹೊಸಬಿ, ಅಜ್ಜಿ ಹಾಗೂ ಇವರ ತಾಯಿ ಹಾಡುಗಾರ್ತಿಯರಾಗಿದ್ದರು. ಸುಬ್ಬ ಗೌಡ ಗುಮಟೆ ವಾದಕರಾಗಿದ್ದರು. ಅನೇಕ ಜೀವನ ಕೌಶಲ್ಯ ತಿಳಿದ ವ್ಯಕ್ತಿಗಳು ಸುಕ್ರಿ ಅವರ ಬಾಲ್ಯದ ಬದುಕಿನ ನೆರೆಹೊರೆಯವರಾಗಿದ್ದರು. ಇವರೆಲ್ಲರ ಜ್ಞಾನ ಸುಕ್ರಿ ಅವರ ಮೈಮನಗಳಲ್ಲಿ ತುಂಬಿಕೊಂಡಿತ್ತು. ಆ ಕಾರಣದಿಂದಲೇ ಶಾಲೆಗೆ ಹೋಗದಿದ್ದರೂ ಜೀವನ ಶಿಕ್ಷಣ ದೊರೆತಿತ್ತು.

ಚಿಕ್ಕವಳಿರುವಾಗಲೇ ದೊಡ್ಡವರ ಜೊತೆ ಸೌದೆ ಹೊರೆಯನ್ನು ತಂದು ಮಾರಿ, ಒಂದಾಣೆಯ ಮೀನು ಒಯ್ಯುತ್ತಿದ್ದರಂತೆ. ಇವರದ್ದು ಬಾಲ್ಯ ವಿವಾಹ. ಹನ್ನೆರಡರ ಸುಕ್ರಿಯೊಂದಿಗೆ ಅಂಕೋಲಾ ತಾಲೂಕಿನ ಬಡಗೇರಿಯ ನಲವತ್ತೈದು ವಯಸ್ಸಿನ ಬೊಮ್ಮಗೌಡರ ಮದುವೆ. ಬೊಮ್ಮಗೌಡರ ಅವಿಭಕ್ತ ಕುಟುಂಬ ಸೇರಿದ ಸುಕ್ರಿ, ಗೃಹಿಣಿಯಾಗಿ ಮನೆಗೆಲಸದಲ್ಲಿ ತೊಡಗಿಕೊಂಡವರು. ಅಂದಿನ



ದಿನಗಳಲ್ಲಿ ಹಾಲಕ್ಕಿ ಗಂಡಸರಲ್ಲಿ ಕುಡಿತದಿಂದ ಸಂಸಾರ ಹಾಳು ಮಾಡಿಕೊಂಡವರು ಹೆಚ್ಚಿದ್ದರು. ಆದರೆ ಸುಕ್ರಿ ಅವರ ಗಂಡ ಕುಡಿಯುತ್ತಿರಲಿಲ್ಲ.

ಮಕ್ಕಳಾಗದ ಕಾರಣ ಸುಕ್ರಿ ಅವರು ತಮ್ಮ ಮಂಗುವಿನ ಮಗ ಶಂಕರನನ್ನು ಸಾಕು ಮಗನಾಗಿ ಮಾಡಿಕೊಂಡರು. ಶಂಕರ ಬಹಳ ಕಾಲ ಉಳಿಯಲಿಲ್ಲ. ತಮ್ಮ ಸೊಸೆ ಮಂಗಲಾ ಹಾಗೂ ಮೊಮ್ಮಕ್ಕಳಾದ ಲಕ್ಷ್ಮಿ ಮತ್ತು ಗುರುವಿನ ಜೊತೆ ಬಡಗೇರಿಯಲ್ಲಿ ಇದ್ದರು.

ಬಡಗೇರಿಯ ಹೆಂಗಸರನ್ನೆಲ್ಲ ಸೇರಿಸಿಕೊಂಡು ಕೆಲಸ ಮಾಡುವ ಹೊತ್ತಿನಲ್ಲಿ ಸ್ವಲ್ಪ ಬಿಡುವು ದೊರೆತರೂ, 'ಹಾಡು ಹೇಳ್ವಾ ಬನ್ನಿ ತಾರ್ಲೆ ಕುಣಿವಾ ಬನ್ನಿ' ಎಂದು ಸುಕ್ರಜ್ಜಿ ಹೆಂಗಸರನ್ನು ಪ್ರೇರೇಪಿಸುತ್ತಿದ್ದರು. ಹಾಡಿನ ಬಗ್ಗೆ ಅಷ್ಟೊಂದು ಪ್ರೀತಿ ಇಟ್ಟುಕೊಂಡ ಜೀವವದು.

ಅಜ್ಜಿ, ಅಮ್ಮ ಹೇಳಿದ ಹಾಡುಗಳನ್ನು ನೆನಪಿಟ್ಟುಕೊಂಡು ಯಾವ ಬಿಂಕ ಬಿಗುಮಾನವಿಲ್ಲದೆ ಎಲ್ಲರಿಗಿಂತ ಮುಂದಾಗಿ ಹಾಡುವ ಧೈರ್ಯವನ್ನು ಮೊದಲು ಮಾಡಿದವರು ಸುಕ್ರಿ ಅವರೇ. ಆ ಕಾಲದ ಒಕ್ಕಲಿಗ ಹೆಂಗಸರು ಬೇರೆಯವರ ಜೊತೆ ಮಾತನಾಡುತ್ತಲೂ ಇರಲಿಲ್ಲ. 'ಬೇಜಾರಾಗ್ತಿದೆ ಸುಕ್ರಿ, ಒಂದ ಹಾಡು ಹೇಳೆ' ಎನ್ನುವಷ್ಟರ ಮಟ್ಟಿಗೆ ಅವರ ಹಾಡನ್ನು ಜನ ಕೇಳಿಸಿಕೊಳ್ಳುತ್ತಿದ್ದರು.

ಬಡಗೇರಿಯ ಗೋವಿಂದ ಮಹಾಲೆಯವರ ಮೂಲಕವಾಗಿ ಸುಕ್ರಿ ಅವರು ಮೊದಲಿಗೆ